ಶ್ರೀ ಡಿ. ದೇವರಾಜ ಅರಸ್.—೩೪೦ ಎಕರೆಗಳನ್ನು ಕೊಟ್ಟಿದ್ದೇವೆ. ದಿನಾಂಕ ೧೦-೧೦-೧೯೭೪ ರಿಂದ ೨೦ ವರ್ಷಗಳ ಅವಧಿಗೆ ಕೊಟ್ಟಿದೆ. The lease has been granted as per conditions in the MMRND Act, 1957 ಅದರ ಪ್ರಕಾರ ಎಂ.ಪಿ ಆರ್. ರೂಲ್ಸ್‌ನ್ನು ೧೯೬೦ರಲ್ಲಿ ಮಾಡಿದ್ದಾರೆ. ಅದರ ಪ್ರಕಾರ ಪರ್ ಟನ್‌ಗೆ ೩ ರೂಪಾಯಿಯಂತೆ ಲೈಂಸೆಲ್‌ಗೆ ಡೆಡ್ ರೆಂಟ್ ಕೊಡಬೇಕು ಎಂದು ಇದೆ. He has to pay either dead rent or royalty whichever is more but not both, The dead rent from 2nd to the 5th year on lease is Rs. 12.50 per hectare per annum; from the 6th year to 10th year it is Rs 25 per hectare per annum and from the 11th year onwards it is Rs, 37.50 per hectare per annum.

ಶ್ರೀ ಎಸ್. ಎಸ್. ಆರಕೇರಿ.—ಈಗ ಹಂಚಿಹರ ಪಾಲಿಫೈಬರ್‌ನವರು ಏನು ನಡೆಸುತ್ತಿದ್ದಾರೆ ಅವರಿಗೆ ಬಿಲಾ ರವರಿಗೆ ಸಬ್‌ಲೀಸ್ ಮಾಡುವ ಅಧಿಕಾರವಿದೆಯೇ ? ಸ್ವಾಪಲಂಬಿ ಸಂಘಕ್ಕೆ ಏಕೆ ಮಾಡಿದ್ದಾರೆ, ಅದರ ಅಗತ್ಯ ಇದೆಯೇ ಇಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಸಬ್‌ಲೀಸ್ ಮಾಡುವುದಕ್ಕೆ ಪ್ರಾವಿಜನ್ ಇದೆ, ಒಂದು ವೇಳೆ ಬೇರೆಯವರಿಗೆ ನಾವು ಕೊಡಬೇಕು ಎನ್ನುವುದಾದರೆ ಈಗ ಲೀಸನ್ನು ಕ್ಯಾನ್ಸಲ್ ಮಾಡಬೇಕಾಗುತ್ತದೆ, ಯಾವ ರೀತಿ ಕ್ಯಾನ್ಸಲ್ ಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ಲೀಗಲ್ ಆಗಿ ಪರಿಶೀಲನೆ ಮಾಡಿಸುತ್ತಿದ್ದೇವೆ.

ಶ್ರೀ ಎಸ್. ಎಸ್. ಆರಕೇರಿ.—ಈ ರೀತಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ಗೆ ಕೊಡುವುದಕ್ಕಿಂತಲೂ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಮುಂತಾದವರಿಗೆ ಕೊಡುವುದಕ್ಕೆ ಅನುಕೂಲ ಮಾಡಿ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಆ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಆದಕ್ಕೋಸ್ಕರವೇ ಲೀಸನ್ನು ಕ್ಯಾನ್ಸಲ್ ಮಾಡುವುದು ಹೇಗೆ ಎಂದು ಲೀಗಲ್ಲಾಗಿ ಪರಿಶೀಲನೆ ಮಾಡಿಸುತ್ತಿದ್ದೇವೆ ಎಂದು ಹೇಳಿದ್ದು.

High School building at Tumari Village, Karur Hobli, Sagar Taluk.

353. SRI L. T. THIMMAPPA HEGDE (Sagar).—Will the Minister for Education be pleased to state :—

(a) whether it has come to the notice of the Government that there is no building for High School in Tumari, Karur Hobli, Sagar Taluk ;

(b) the number of years since the High School was started ;

(c) whether definite period required to complete this building would be indicated ?

SRI B. SUBBAYYA SHETTY (Minister for Education) —

(a) Yes.

(b) This High School was started during 1968-69.

(c) The estimate for Rs. 3,25,000 and a plan prepared for the building of Government High School, Tumari has been considered by

the Government during July, 1978. The Chief Engineer, (C&B) was asked whether it was possible to take up the work of the building during the current financial year. The Chief Engineer stated that the said estimate for Rs. 3 25 lakhs was prepared at the rates prevailing during 1975-76 so it has to be renewed at the new rates. The renewed estimate and plan have been obtained and suitable action will be taken to complete the said High School building during 1979-80 provided sufficient funds are sanctioned during the next year.

ಶ್ರೀ ಎಲ್, ಟಿ. ತಿಮ್ಮಪ್ಪ ಹೆಗಡೆ.—ಮಂತ್ರಿಗಳು ಉತ್ತರ ಕೊಡುವಾಗ ಇನ್ನೂ ಸ್ವಲ್ಪ ಸ್ಪಷ್ಟವಾಗಿ ಕೊಟ್ಟಿದ್ದರೆ ಚೆನ್ನಾಗಿತ್ತು ; ವೇಗವಾಗಿ ಕೊಟ್ಟಿದ್ದಾರೆ. ನಾನು ಕೇಳಿರುವ ಪ್ರೌಢ ಶಾಲೆಯ ಪ್ರದೇಶ ಶರಾವತಿ ಯೋಜನೆಯಿಂದ ಅತ್ಯಂತ ಕಷ್ಟಕ್ಕೆ ಸಿಕ್ಕಿದೆ. ಅದು ಹಳ್ಳಿಗಾಡಿನ ಜನರು ಇರುವಂಥ ಪ್ರದೇಶ, ಸುತ್ತಲೂ ನೀರು ಆವರಿಸಿರುವಂಥ ಪ್ರದೇಶ ಎನ್ನುವುದನ್ನು ಗಮನಿಸುತ್ತೀರಾ, ಹಾಗೆ ಗಮನಿಸಿದ್ದರೆ ಅದಕ್ಕೆ ಪ್ರಥಮ ಆದ್ಯತೆ ಕೊಡಬೇಕಾಗಿತ್ತೇ ಇಲ್ಲವೇ ?

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಇದಕ್ಕೆ ಆದ್ಯತೆ ಕೊಡುತ್ತೇವೆ. ಆದರೆ ಈಗ ಸ್ವಲ್ಪ ಹಣದ ಅಭಾವ ವಿದ್ದುದರಿಂದ ಅದನ್ನು ತೆಗೆದುಕೊಳ್ಳಲಿಕ್ಕೆ ಬರಲಿಲ್ಲ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಆದ್ಯತೆ ಕೊಡುತ್ತೇವೆ ಎಂದರೆ, ಮೂರನೇ ಪ್ರಶ್ನೆಯ ಉತ್ತರದಲ್ಲಿ ಮುಂದಿನ ವರ್ಷ ಮಂಜೂರು ಮಾಡಿದರೆ ಈ ಪ್ರೌಢ ಶಾಲೆಯ ಕಟ್ಟಡವನ್ನು ೧೯೭೯-೮೦ರಲ್ಲಿ ಪೂರೈಸುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಇಷ್ಟು ವರ್ಷ ಗಳಿಂದ ಬಹುಶಃ ರಾಜ್ಯದಲ್ಲಿ ಎಲ್ಲೂ ಕಟ್ಟಡಗಳು ಆಗಿಲ್ಲವೇ ; ಅದಕ್ಕೆ ಆದ್ಯತೆ ಕೊಟ್ಟಿಲ್ಲವೇ. ಆದುದರಿಂದ ಇದಕ್ಕೆ ಪ್ರಥಮ ಆದ್ಯತೆ ಕೊಡುವುದಕ್ಕೆ ಆಗಲಿಲ್ಲವೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಸಲ ಹೊಸ ಕಟ್ಟಡಗಳಿಗೆ ಹೆಚ್ಚು ಹಣ ಇಟ್ಟಿಲ್ಲ. ಆದುದರಿಂದ ಈ ವರ್ಷ ನಮಗೆ ತೆಗೆದುಕೊಳ್ಳಲಿಕ್ಕೆ ಕಷ್ಟ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಈ ವರ್ಷ ಕಷ್ಟ ಎಂದರೆ ೧೯೭೮-೭೯ರಲ್ಲಿ ಶಾಲೆ ಪ್ರಾರಂಭ ವಾಗಿ ೧೦ ವರ್ಷ ಕಳೆದಿದೆ. ಇನ್ನೆಷ್ಟು ವರ್ಷ ಬೇಕಾಗುತ್ತದೆ. ಹೋಗಲಿ ಆ ಶಾಲೆಗೆ ಕಟ್ಟಡ ಇಲ್ಲ ಎಂದು ಹೇಳಿಬಿಡಿ. ಇಂಥಾ ವರ್ಷ ಮಾಡಿಕೊಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಸ್ವಾಮಿ ರಾಜ್ಯದಲ್ಲಿ ೩೩,೦೦೦ ಪ್ರೈಮರಿ ಸ್ಕೂಲ್ ಕಟ್ಟಡಗಳು ಬೇಕಾಗಿವೆ, ಅದೇ ರೀತಿ ೨೦೦ಕ್ಕೂ ಮಿಕ್ಕೆ ಹೈಸ್ಕೂಲ್ ಕಟ್ಟಡಗಳು ಬೇಕಾಗಿವೆ, ಎಲ್ಲಾ ಕಡೆ ಆದ್ಯತೆ ಇರುವಂಥಾದ್ದು. ಇದು ಮಂಳುಗಡೆಯಾದ ಪ್ರದೇಶ, ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎನ್ನುವು ದನ್ನು ಒಪ್ಪುತ್ತೇನೆ ಆದ್ದರಿಂದಲೇ ಇದನ್ನು ಪ್ರಯಾರಿಟಿ ಲಿಸ್ಟ್‌ನಲ್ಲಿ ಹಾಕಿದ್ದೇವೆ. ಪ್ರಯಾರಿಟಿ ಲಿಸ್ಟ್ ನಲ್ಲಿ ಇದ್ದರೂ ಹಣದ ಅನುಕೂಲತೆ ನೋಡಿಕೊಂಡು ಹೋಗಬೇಕಾಗುತ್ತದೆ, ಲಿಸ್ಟ್‌ನಲ್ಲಿ ಹಾಕಿದ ತಕ್ಷಣ ಕಟ್ಟಡ ಬರುವುದಿಲ್ಲ. ಇದಕ್ಕೆ ಬಜೆಟ್‌ನಲ್ಲಿ ಹೆಚ್ಚಿಗೆ ಹಣ ಇಲ್ಲದೇ ಹೋದರೂ ಕೂಡ ಬೇರೆ ಮೂಲ ದಿಂದ ಹೆಚ್ಚಿನ ಹಣವನ್ನು ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ ಹಣ ಸಿಕ್ಕಿದ ಕೂಡಲೆ ಇದನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ.

Alleged lathi charge on a procession in Belgaum City

383 SRI B. B. SAYANAK (Belgaum) —Will the Chief Minister be pleased to state :—

(a) whether Government is aware that Maharashtra Ekikarana Samithi has been observing the 1st November of every year as a Block day in border area for the last 22 years.